DEEDS Since 1982

ಸಂವಾದ 2

ಖಾಸಗಿ ಪ್ರಸಾರಕ್ಕಾಗಿ ಮಾತ್ರ

# DEEDS ಸಂವಾದ

**ಸಮತೆಯ ಸಮಾಜದೆಡೆಗೆ**

## ನಿರ್ದೇಶಕರ ಮಾತು



ಮರ್ಲಿನ್ ಮಾರ್ಟಿಸ್

ಒಂದು ಕ್ಯಾಲೆಂಡರ್ ವರ್ಷ ಉರುಳಿ ಹೊಸ ಕ್ಯಾಲೆಂಡರ್ ಗೋಡೆ ಏರಿದೆ. 2021ನೇ ವರ್ಷ ನಿಮಗೆ, ನಿಮ್ಮ ಕುಟುಂಬಕ್ಕೆ ಆರೋಗ್ಯ, ಯಶಸ್ಸು, ಸಮೃದ್ಧಿ ದಯಪಾಲಿಸಲಿ ಎಂದು ಡೀಡ್ಸ್ ಬಳಗದ ಹಾರೈಕೆ.

ಸಮಾಜಕ್ಕೆ ಮಹಿಳೆ ಪುರುಷನಷ್ಟೇ ಕೊಡುಗೆಗಳನ್ನು ನೀಡುತ್ತಿದ್ದರೂ ಅವಕಾಶಗಳಲ್ಲಿ ತಾರತಮ್ಯ ಯಾಕಿದೆ? ಅವಳಿಗೂ ಪುರುಷನಷ್ಟೇ ಸ್ವಾತಂತ್ರ್ಯ ಅನುಭವಿಸುವ, ತನ್ನ ಜೀವನ ತಾನು ರೂಪಿಸಿಕೊಳ್ಳುವ ಅವಕಾಶಗಳಿರಬೇಕು. ನಮ್ಮ ಮನೆಗಳಲ್ಲಿ ಹೆಣ್ಣು, ಗಂಡು ಮಕ್ಕಳನ್ನು ಸಮಾನವಾಗಿ ಕಾಣುವ, ಬೆಳೆಸುವ ಕಾರ್ಯವಾಗಬೇಕು, ಆಕೆಯ ಆಸೆ, ಕನಸು, ಗುರಿಗಳನ್ನು ಪ್ರೋತ್ಸಾಹಿಸುವ ಹಾಗೂ ಆಕೆಯ ಅಭಿಪ್ರಾಯ, ನಿರ್ಧಾರಗಳಿಗೆ ಮನ್ನಣೆ ನೀಡುವ ಕಾರ್ಯಗಳಾದಾಗ ಮಾತ್ರ ಸಮಾನತೆ, ನವಸಮಾಜ ನಿರ್ಮಾಣವಾಗಲು ಸಾಧ್ಯ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಮೇಲಿನ ಲಿಂಗತಾರತಮ್ಯ ಮತ್ತು ಹಿಂಸೆಯನ್ನು ತಡೆಯಲು ಡೀಡ್ಸ್ ಪೂರಕ ಕಾನೂನು ಯೋಜನೆಯನ್ನು ಆರಂಭಿಸಿದೆ. ಯೋಜನೆಯಂತೆ ಉತ್ತರ ಕನ್ನಡ, ಧಾರವಾಡ, ಬಾಗಲಕೋಟೆ, ಬಳ್ಳಾರಿ ಜಿಲ್ಲೆಗಳಲ್ಲಿ 2020-2021ರ ಸಾಲಿನಲ್ಲಿ ಲಿಂಗತ್ವ, ಮಹಿಳಾ ಕಾನೂನುಗಳು, ಮಹಿಳಾ ಪ್ರಕರಣಗಳ ನಿರ್ವಹಣೆಗೆ ಸಂಬಂಧಿಸಿ 3 ಹಂತಗಳ ಒಟ್ಟು 12 ದಿನಗಳ ಪೂರಕ ಕಾನೂನು ತರಬೇತಿಯನ್ನು ಆಯ್ದ 160 ಮಂದಿಗೆ ನಡೆಸಲು ಉದ್ದೇಶಿಸಿದೆ. ಈ 160 ಮಂದಿ ಅವರ ಪ್ರದೇಶದ ಕನಿಷ್ಟ 50 ಮಂದಿಗೆ 2 ಮಾಹಿತಿ ಕಾರ್ಯಕ್ರಮಗಳನ್ನು 3 ಹಂತಗಳಲ್ಲಿ ನಡೆಸಲಿದ್ದಾರೆ. ಹೀಗೆ ತಳಮಟ್ಟದಲ್ಲಿ ಮಾಹಿತಿ ಪಡೆಯುವ ಅಂದಾಜು 8000 ಮಂದಿ ಪ್ರತೀ ಹಂತದಲ್ಲಿ ಪ್ರತಿಯೊಬ್ಬರೂ ಅವರ ಪ್ರದೇಶದ ಕನಿಷ್ಟ 10 ಮನೆಗಳಿಗೆ ಅವರು ಕಲಿತ ಮಾಹಿತಿ ಮತ್ತು ಮಾಹಿತಿ ಸಾಮಗ್ರಿಗಳನ್ನು ಹಂಚಲಿದ್ದಾರೆ. ಈ ಮೂಲಕ ತಳಮಟ್ಟದ ಮಹಿಳೆಯರಲ್ಲಿ, ಜನರಲ್ಲಿ, ಹಿಂಸೆಗೊಳಗಾದವರಲ್ಲಿ ಅರಿವನ್ನು ಮೂಡಿಸುವುದು, ಅವರ ತೊಂದರೆಗಳಿಗೆ ಅವರೇ ಸರಕಾರಿ ನ್ಯಾಯ ವ್ಯವಸ್ಥೆಗಳ ಮೂಲಕ ನ್ಯಾಯವನ್ನು ಪಡೆಯುವಂತಾಗಲು ಸಹಾಯ ಮಾಡುವುದನ್ನು ಉದ್ದೇಶಿಸಲಾಗಿದೆ.

2020–2021ರ ಸಾಲಿನಲ್ಲಿ ಮೊದಲ ಹಂತದ ಲಿಂಗತ್ವ ತರಬೇತಿಯು ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪ್ರಾರಂಭವಾಗುತ್ತಿದೆ. ಮುಂದೆ ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು ನಡೆಯಲಿವೆ. ಉತ್ತರ ಕನ್ನಡದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ–ಹುಬ್ಬಳ್ಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಡೆಯಲಿದೆ. ಪೂರಕ ಕಾನೂನು ಸುಗಮಕಾರರ ಕಾರ್ಯಕ್ರಮವು ಧಾರವಾಡ ಜಿಲ್ಲೆಯ ಧಾರವಾಡ ಸೆಲೇಸಿಯನ್ ಸೊಸೈಟಿ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ಧಾರವಾಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಧಾರವಾಡ ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಡೆಯಲಿದೆ.

ಹೊಸ ಕಾನೂನುಗಳ ಮಾಹಿತಿ, ಮಹಿಳೆಯರ ಸ್ಥಿತಿಗತಿ ಬಗೆಗಿನ ಲೇಖನ, ಮಹಿಳೆಯರ ಸಮಸ್ಯೆಗಳು ಮತ್ತು ಸ್ಪಂದನೆ, ನಮ್ಮ ಕಾರ್ಯಕ್ರಮಗಳ ವಿವರಗಳನ್ನು ಈ ಸಂವಾದದ ಮೂಲಕ ತಳಮಟ್ಟದ ಜನರಿಗೆ ತಲುಪಿಸಲು ಪ್ರಯತ್ನಿಸಲಾಗುತ್ತಿದೆ. ನಿಮ್ಮೆಲ್ಲರ ಸಹಕಾರವನ್ನು ಈ ನಿಟ್ಟಿನಲ್ಲಿ ನಿರೀಕ್ಷಿಸುತ್ತೇವೆ. ಹೆಣ್ಮಕ್ಕಳ, ಮಹಿಳೆಯರ, ನಮ್ಮೆಲ್ಲರ ಬದುಕನ್ನು, ಮುಂದಿನ ನಮ್ಮ ಮಕ್ಕಳ–ಸಮುದಾಯದ ಬದುಕನ್ನು ಸಂತೋಷದಿಂದಿರಿಸಲು ಸಾಧ್ಯವಿರುವ ಈ ಚಟುವಟಿಕೆಗಳಿಗೆ ನಿಮ್ಮೆಲ್ಲರ ಉತ್ಸಾಹದ ಭಾಗವಹಿಸುವಿಕೆ, ಪ್ರೋತ್ಸಾಹ, ಸಹಭಾಗಿತ್ವವನ್ನು ಡೀಡ್ಸ್ ಬಯಸುತ್ತದೆ.

## ಕೋರ್ ಟೀಮ್ ಮೀಟಿಂಗ್

ಪೂರಕ ಕಾನೂನು ತರಬೇತಿ ವಿಷಯಗಳು, ವಿಧಾನಗಳು, ಯೋಜನೆಯ ಒಟ್ಟು ಪ್ರಕ್ರಿಯೆ ಬಗ್ಗೆ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಲು ಡೀಡ್ಸ್ ಪರಿಣತ ತಂಡವನ್ನು ರಚಿಸಿದ್ದು, ಅದರ ಸಭೆಯು ದಿನಾಂಕ 5 ನವೆಂಬರ್ 2020ರಂದು ಡೀಡ್ಸ್ ಕಛೇರಿಯಲ್ಲಿ ನಡೆಯಿತು. ಶ್ರೀಮತಿ ವಾಣಿ ಪೆರಿಯೋಡಿ–ಲಿಂಗತ್ವ ತಜ್ಞರು–ಅಧ್ಯಕ್ಷರು ಡೀಡ್ಸ್, ರೆವರೆಂಡ್ ಫಾದರ್ ಫ್ರಾನ್ಸಿಸ್ ಆಸಿಸ್ ಡಿ ಅಲ್ಮೆಡಾ–ಸಂದೇಶ ಸಾಂಸ್ಕೃತಿಕ ಮತ್ತು ಶಿಕ್ಷಣ ಪ್ರತಿಷ್ಟಾನ, ಡಾ. ಅನಿತಾ ರವಿಶಂಕರ್, ನಿರ್ದೇಶಕರು–ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಇವರುಗಳು ಭಾಗವಹಿಸಿ ತಮ್ಮ ಸಲಹೆಯನ್ನಿತ್ತರು. ಕಾನೂನು ಸೇವೆಗಳ ಅಧ್ಯಯನವು ಅಗತ್ಯವಾಗಿದ್ದು, ಎಲ್ಲಾ ವರ್ಗದ ಪ್ರಯೋಜನಾರ್ಥಿಗಳಿಂದ ಅಭಿಪ್ರಾಯಗಳನ್ನು ಪಡೆದುಕೊಳ್ಳಬೇಕು. ಅಧ್ಯಯನವನ್ನು ಇಲಾಖೆಯ ಸಹಭಾಗಿತ್ವದೊಂದಿಗೆ, ಅನುಮತಿಯೊಂದಿಗೆ ನಡೆಸಬೇಕು. ಅಧ್ಯಯನದ ವರದಿ, ಶಿಫಾರಸ್ಸುಗಳನ್ನು ಇಲಾಖಾ ಅಧಿಕಾರಿಗಳೊಂದಿಗೆ ಹಂಚಿಕೊಳ್ಳಬೇಕು. ಪೂರಕ ಕಾನೂನು ತರಬೇತಿ–



ಯೋಜನೆಯ ಪ್ರಕ್ರಿಯೆಯಲ್ಲಿ ಇಲಾಖೆಗೆ ಸಂಬಂಧಿಸಿ ಏನಾದರೂ ಕಂಡುಕೊಂಡ ಅಂಶಗಳಿದ್ದಲ್ಲಿ ಅವನ್ನು ಇಲಾಖೆಯ ಗಮನಕ್ಕೆ ತರಬೇಕು, ಅಧಿಕಾರಿಗಳ ಜತೆ ಚರ್ಚಿಸಬೇಕು. ಆಗ ಮಾತ್ರ ಸಮಸ್ಯೆ ಪರಿಹಾರವಾಗಲು ಸಾಧ್ಯ ಎಂದು ಹೇಳಿದರು.

# ಪೂರಕ ಕಾನೂನು ಕಾರ್ಯಕ್ರಮ

## ಉತ್ತರ ಕನ್ನಡ ಜಿಲ್ಲೆ



ಉತ್ತರ ಕನ್ನಡ ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಗಳು, ಸಂಘ ಸಂಸ್ಥೆಗಳ ಮುಖ್ಯಸ್ಥರು ಮತ್ತು ಗುರುತಿಸಲ್ಪಟ್ಟ ಸಂಸ್ಥೆಗಳ ಕಾರ್ಯಕರ್ತರುಗಳಿಗೆ ಪೂರಕ ಕಾನೂನು ತರಬೇತಿಯ ಮಾಹಿತಿ ಕಾರ್ಯಕ್ರಮವು ಹೊನ್ನಾವರದ ಸಂತ ಇಗ್ನೇಶಿಯಸ್ ಹೆಲ್ತ್ ಮತ್ತು ಎಜುಕೇಶನ್ ಟ್ರಸ್ಟ್ ಸಭಾಂಗಣದಲ್ಲಿ ದಿನಾಂಕ 18–11–2020ರಂದು ಡೀಡ್ಸ್ ಮಂಗಳೂರು ಮತ್ತು ಸಂತ ಇಗ್ನೇಶಿಯಸ್ ಹೆಲ್ತ್ ಮತ್ತು ಎಜುಕೇಶನ್ ಟ್ರಸ್ಟ್ ಸಹಭಾಗಿತ್ವದಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 37 ಮಂದಿ ಭಾಗವಹಿಸಿದ್ದರು. ಪೂರಕ ಕಾನೂನು ಕಾರ್ಯಕ್ರಮದ ಪರಿಕಲ್ಪನೆ–ಅಗತ್ಯ–ಪ್ರಯೋಜನಗಳನ್ನು ಉಪಯೋಗಗಳು–ವಿದಾನಗಳು, ಮೂಲ ಮಾಹಿತಿ ಸಂಗ್ರಹದ ಬಗ್ಗೆ ಮಾಹಿತಿಯನ್ನು ನೀಡಲಾಯಿತು. 2ನೇ ಸಭೆಯು 18–12–2020ರಂದು ದಿ ಸೋಶಿಯಲ್ ಕ್ಲಬ್ ಹೊನ್ನಾವರದಲ್ಲಿ ನಡೆಯಿತು. ಒಟ್ಟು 24 ಮಂದಿ ಭಾಗವಹಿಸಿದ್ದರು. ಈ ಸಭೆಯಲ್ಲಿ ಪೂರಕ ಕಾನೂನು ಸುಗಮಕಾರರು ಮೂಲ ಮಾಹಿತಿ ಸಂಗ್ರಹಿಸುವಾಗ ಅವರಿಗಾದ ಅನುಭವವನ್ನು ಹಂಚಿಕೊಂಡರು. ಆಸ್ತಿ ಹಕ್ಕು ಮತ್ತು ಮಹಿಳಾ ದೌರ್ಜನ್ಯಕ್ಕೆ ಸಂಬಂಧಿಸಿದ ಕಾನೂನು ತಿಳುವಳಿಕೆಯ ಅಗತ್ಯವನ್ನು ಮುಂದಿಟ್ಟರು. ಕಾರ್ಯಕ್ರಮದಲ್ಲಿ ಸಂತ ಇಗ್ನೇಶಿಯಸ್ ಹೆಲ್ತ್ ಎಂಡ್ ಎಜುಕೇಶನ್ ಟ್ರಸ್ಟ್‌ನ ಶ್ರೀ ಜೋಸೆಫ್, ಡೀಡ್ಸ್ ನಿರ್ದೇಶಕಿ ಮರ್ಲಿನ್ ಮಾರ್ಟಿಸ್, ತುಕಾರಾಮ ಎಕ್ಕಾರು, ಜೆಸಿಂತ ಪಿರೇರಾ, ನಿಖಿತ ಉಪಸ್ಥಿತರಿದ್ದರು.

## ಧಾರವಾಡ ಜಿಲ್ಲೆ

ಧಾರವಾಡ ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಗಳು, ಸಂಘ ಸಂಸ್ಥೆಗಳ ಮುಖ್ಯಸ್ಥರು ಮತ್ತು ಗುರುತಿಸಲ್ಪಟ್ಟ ಸಂಸ್ಥೆಗಳ ಕಾರ್ಯಕರ್ತರುಗಳಿಗೆ ಪೂರಕ ಕಾನೂನು ತರಬೇತಿಯ ಮಾಹಿತಿ ಕಾರ್ಯಕ್ರಮವು ದಿನಾಂಕ 19–11–2020ರಂದು ಹುಬ್ಬಳ್ಳಿಯ ಡಾನ್ ಬಾಸ್ಕೋ ಅಕಾಡೆಮಿ ಸಭಾಂಗಣದಲ್ಲಿ, ಡೀಡ್ಸ್ ಮಂಗಳೂರು ಮತ್ತು ಧಾರವಾಡ ಸೆಲೇಸಿಯನ್ ಸೊಸೈಟಿ ಸಹಭಾಗಿತ್ವದಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 56 ಮಂದಿ ಭಾಗವಹಿಸಿದ್ದರು. 2ನೇ ಸಭೆಯು 18–12–2020ರಂದು ನಡೆಯಿತು. ಒಟ್ಟು 24 ಮಂದಿ ಭಾಗವಹಿಸಿದ್ದರು. ಈ ಸಭೆಯಲ್ಲಿ ಪೂರಕ ಕಾನೂನು ಸುಗಮಕಾರರು ಮೂಲ ಮಾಹಿತಿ ಸಂಗ್ರಹಿಸುವಾಗ ಅವರಿಗಾದ ಸಕಾರತ್ಮಕ ಮತ್ತು ನಕಾರತ್ಮಕ ಅನುಭವವನ್ನು ಹಂಚಿಕೊಂಡರು. ಇದರಿಂದ ಪ್ರೇರಿತವಾಗಿ




ಮೂಲ ಮಾಹಿತಿ ಸಂಗ್ರಹಿಸುವುದು ಮತ್ತು ತರಬೇತಿಯನ್ನು ಪಡೆದು ಇತರರಿಗೆ ಸಹಾಯ ಮಾಡಬೇಕು ಎಂದು ನಿರ್ಧರಿಸಿದರು.

ಕಾರ್ಯಕ್ರಮದಲ್ಲಿ ಸೆಲೇಸಿಯನ್ ಸೊಸೈಟಿಯ ನಿರ್ದೇಶಕರಾದ ಫಾದರ್ ಪೀಟರ್ ಪಿಂಟೊ, ಫಾದರ್ ಸಂತ ರೆಮೆಂಡ್ಸ್ ಲೊಪಿಸ್, ಫಾದರ್ ಜೋಸೆಫ್, ಡೀಡ್ಸ್ ನಿರ್ದೇಶಕಿ ಮರ್ಲಿನ್ ಮಾರ್ಟಿಸ್, ತುಕಾರಾಮ ಎಕ್ಕಾರು, ಜೆಸಿಂತ ಪಿರೇರಾ ಉಪಸ್ಥಿತರಿದ್ದರು.

# ಪೂರಕ ಕಾನೂನು ಸುಗಮಕಾರರ ತರಬೇತಿ ಕಾರ್ಯಕ್ರಮ




ಉತ್ತರ ಕನ್ನಡ ಜಿಲ್ಲೆಯ ಆಯ್ದ ಪೂರಕ ಕಾನೂನು ಸುಗಮಕಾರರಿಗೆ ಮೊದಲ ಹಂತದ ಲಿಂಗತ್ವ ಬಗೆಗಿನ 2 ದಿನಗಳ ಕಾರ್ಯಕ್ರಮವು ಜನವರಿ 12 ಮತ್ತು 13, 2021ರಂದು ದಿ ಸೋಶಿಯಲ್ ಕ್ಲಬ್ ಹೊನ್ನಾವರದಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾದ ಪ್ರೊ. ಪಿ. ಈಶ್ವರ್ ಭಟ್ ಆನ್‌ಲೈನ್ ಮೂಲಕ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಡೀಡ್ಸ್‌ನ ನಿರ್ದೇಶಕಿ ಮರ್ಲಿನ್ ಮಾರ್ಟಿಸ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶ್ರೀಮತಿ ಗುಲಾಬಿ ಬಿಳಿಮಲೆ ದಿಕ್ಸೂಚಿ ಭಾಷಣ ಮಾಡಿದರು. ಮುಖ್ಯ ಅತಿಥಿಯಾಗಿ ಮಾಧ್ಯಮ ತಜ್ಞರು ಮತ್ತು ಡೀಡ್ಸ್‌ನ ಸಲಹೆಗಾರರಾದ ಮೋಹನ್ ಚಂದ್ರ ಉಪಸ್ಥಿತರಿದ್ದರು. ಹಾಜರಿದ್ದ ಅತಿಥಿಗಳು ಲಿಂಗತ್ವ ಮಾಹಿತಿ ಕೈಪಿಡಿ, ತಳಮಟ್ಟದ ಮಾಹಿತಿ ಕಾರ್ಯಕ್ರಮ ಕೈಪಿಡಿ, ಸಂವಾದ, ಲಿಂಗತ್ವ ಸೂಕ್ಷ್ಮತೆ ಬಗೆಗಿನ ಕರಪತ್ರವನ್ನು ಬಿಡುಗಡೆಗೊಳಿಸಿದರು. ಮೀರಾ ಪ್ರಭಾಕರ್ ಕಾರ್ಯಕ್ರಮ ನಿರೂಪಿಸಿದರು, ಶ್ರೀ ಗಣಪತಿ ನಾಯ್ಕ ಸ್ವಾಗತಿಸಿದರು, ಜಿಲ್ಲಾ ಕಾರ್ಯಕ್ರಮ ಸಂಯೋಜಕಿ ಎರ್ಮಿಲಿನ್ ರೊಡ್ರಿಗಸ್ ಧನ್ಯವಾದವಿತ್ತರು.

# ಹಿಂಸೆಯಿಂದ ಬದುಕಿ ಉಳಿದ ಮಹಿಳೆಯರ ಸಮ್ಮಿಲನ

ನಾನು ಪ್ರತಿದಿನವೂ ಕೌಟುಂಬಿಕ ದೌರ್ಜನ್ಯ ಅನುಭವಿಸಿದ್ದು ಅಲ್ಲದೆ ಹಿಂಸೆ ಇಲ್ಲದ ದಿನವೇ ಇರುತ್ತಿರಲಿಲ್ಲ. ಈಗ ನಾವು ಡೀಡ್ಸ್ ಸಂಸ್ಥೆಯ ಸಹಾಯದಿಂದ ಖುಷಿಯಿಂದ ಜೀವನ ನಡೆಸುತ್ತಿದ್ದೇವೆ ಎಂದು ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರು ದಿನಾಂಕ 27–10–2020ರಂದು ಡೀಡ್ಸ್ ಸಂಸ್ಥೆಯಲ್ಲಿ ಆಯೋಜಿಸಿದ ಸಮ್ಮಿಲನ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು. ಕೌಟುಂಬಿಕ ದೌರ್ಜನ್ಯವು ಅವರ ಆತ್ಮವಿಶ್ವಾಸವನ್ನು ಕುಗ್ಗಿಸಿ ಅವರನ್ನು ಕೀಳರಿಮೆಗೆ ತಳ್ಳುವುದರಿಂದ ಅಂತಹವರನ್ನು ಸಾರ್ವಜನಿಕವಾಗಿ ಮುನ್ನೆಲೆಗೆ ತಂದು ಅವರಲ್ಲಿ ಬದುಕಿನ ಆಶಾಕಿರಣವನ್ನು ತುಂಬಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿತ್ತು.

ಕೊರೋನಾದ ಈ ಕಾಲಘಟ್ಟದಲ್ಲಿ ಅದೆಷ್ಟೋ ಮಹಿಳೆಯರು ತೀವ್ರವಾದ ಕೌಟುಂಬಿಕ ದೌರ್ಜನ್ಯಕ್ಕೆ ತುತ್ತಾಗುತ್ತಿದ್ದು, ಅಂತಹ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಡೀಡ್ಸ್ ಸಂಸ್ಥೆಯು ಸಹಕರಿಸಿದೆ.

ಈಗಾಗಲೇ ಹಲವಾರು ಪ್ರಕರಣಗಳು ಪೊಲೀಸು ಠಾಣೆಯಲ್ಲಿ ದಾಖಲಾಗಿದ್ದು, ಕೆಲವು ಪ್ರಕರಣಗಳು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮುಖಾಂತರ ನ್ಯಾಯಾಲಯದಲ್ಲಿ ದಾಖಲಾಗಿರುತ್ತವೆ.

ಸಮ್ಮಿಲನ ಕಾರ್ಯಕ್ರಮದಲ್ಲಿ ಸುಮಾರು 15 ಮಂದಿ ಮಹಿಳೆಯರು ತಮ್ಮ ಜೀವನದ ಸಿಹಿ–ಕಹಿ ನೆನಪುಗಳನ್ನು ಹಂಚಿಕೊಂಡರು. ಸಮ್ಮಿಲನದ ಸದಸ್ಯರ ಮನವರಳಿಸುವ ಕೆಲವು ಉತ್ತೇಜನಾತ್ಮಕವಾದ ಆಟಗಳನ್ನು ಆಡಿಸಲಾಯಿತು. ಸದಸ್ಯರೆಲ್ಲರೂ ತಮ್ಮ ಸಮಸ್ಯೆಗಳನ್ನು ಮರೆತು ಉತ್ಸಾಹದಿಂದ ಆಟಗಳಲ್ಲಿ ಭಾಗವಹಿಸಿದರು. ಸದಸ್ಯೆಯೊಬ್ಬರು ಕವನವೊಂದನ್ನು ರಚಿಸಿ ತಮ್ಮ ಭಾವತೀವ್ರತೆಯನ್ನು ಅನಾವರಣಗೊಳಿಸಿ ತಾವು ಮರೆತಿದ್ದ ತಮ್ಮ ಪ್ರತಿಭೆಯನ್ನು ಹೊರತೆಗೆದು ಎಲ್ಲರನ್ನೂ ಚಕಿತಗೊಳಿಸಿದರು. ಸಂಸ್ಥೆಯ ನಿರ್ದೇಶಕಿ ಮರ್ಲಿನ್ ಮಾರ್ಟಿಸ್ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ತರಬೇತುದಾರರ ಸಂಚಲನದ ಹರಿಣಿಯವರು ಸಮ್ಮಿಲನವನ್ನು ನಿರ್ವಹಿಸಿದರು. ಕಾನೂನು ಸಂಯೋಜಕರಾದ ದೀಪಾ ಎಂ. ಕಾರ್‍ಯಕ್ರಮ ಸಂಘಟಿಸಿದ್ದರು.

## ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸು 21ಕ್ಕೆ ಏರಿಸುವ ಕುರಿತು

ಭಾರತದಲ್ಲಿ ಕಾನೂನು ಪ್ರಕಾರ ಹೆಣ್ಣು ಮಕ್ಕಳ ಮದುವೆಯ ವಯಸ್ಸು ಕನಿಷ್ಠ 18 ವರ್ಷ ಮತ್ತು ಗಂಡು ಮಕ್ಕಳ ವಯಸ್ಸು ಕನಿಷ್ಠ 21 ತುಂಬಿರಬೇಕು. ಇತ್ತೀಚಿಗೆ ತಿಳಿದಿರುವಂತೆ ಕಾನೂನುಬದ್ಧವಾಗಿ ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು ಬದಲಾವಣೆ ಮಾಡಲು ಸರಕಾರ ಚಿಂತಿಸುತ್ತಿದೆ. ಇದಕ್ಕಾಗಿ ಸಮಿತಿಯೊಂದನ್ನು ರಚಿಸಲಾಗಿದ್ದು, ಈ ಸಮಿತಿಯು ಹುಟ್ಟುವ ಮಕ್ಕಳ ಮತ್ತು ತಾಯಿಯ ಆರೋಗ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ವರದಿ ನೀಡಲಿದೆ. ಈ ಸಮಿತಿಯ ವರದಿಯನ್ನು ಆಧರಿಸಿ ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು ನಿಗದಿಪಡಿಸಲು ನಿರ್ಧರಿಸಲಾಗಿದೆ. ಈ ನಿರ್ಧಾರದ ಹಿಂದಿರುವ ಪ್ರಮುಖ ಕಾರಣಗಳು ಈ ಕೆಳಗಿನಂತಿವೆ :

- ಗಂಡು ಮತ್ತು ಹೆಣ್ಣಿನ ಮದುವೆಯ ಕನಿಷ್ಠ ವಯಸ್ಸಿನ ವಿಚಾರದಲ್ಲಿ ಯಾವುದೇ ತಾರತಮ್ಯ ಇರಬಾರದು.
- 18 ವರ್ಷಕ್ಕೆ ಮದುವೆಯಾಗುವ ಹೆಣ್ಣು ಮಕ್ಕಳಿಗೆ ಹುಟ್ಟುವ ಮಕ್ಕಳಲ್ಲಿ ಆರೋಗ್ಯದ ಸಮಸ್ಯೆಯು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದು.
- ಹೆಣ್ಣು ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿರುವ ಆಹಾರದ ಕೊರತೆಯ ಸಮಸ್ಯೆ ಮತ್ತು ಹೆಚ್ಚು ಗರ್ಭಿಣಿಯರು ರಕ್ತಹೀನತೆಯಿಂದ ಬಳಲುತ್ತಿರುವುದು.
- ಇಳಿಯ ವಯಸ್ಸಿನಲ್ಲಿ ಮದುವೆಯಾದ ಹೆಣ್ಣು ಮಕ್ಕಳು ಕೌಟುಂಬಿಕ ಹಿಂಸೆ, ಗರ್ಭಪಾತ, ಖಿನ್ನತೆ, ಆತಂಕಕ್ಕೊಳಗಾಗುತ್ತಿರುವುದು.
- ಚಿಕ್ಕ ವಯಸ್ಸಿನಲ್ಲಿ ಮಗುವನ್ನು ಹೆರುವುದರಿಂದ ಹೆಣ್ಣು ಮಕ್ಕಳ ಅಸಹಜ ಸಾವು ಸಂಭವಿಸುತ್ತಿರುವುದು.
- 18 ವರ್ಷಕ್ಕೆ ಮದುವೆಯಾಗುವ ಹೆಣ್ಣು ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿರುವುದು.

2019ರಲ್ಲಿ ನ್ಯಾಷನಲ್ ಕಮಿಷನ್ ಫಾರ್ ಪ್ರೊಟೆಕ್ಷನ್ ಆಫ್ ಚೈಲ್ಡ್‌ರೈಟ್ ನೀಡಿರುವ ಅಂಕಿ ಅಂಶದ ಪ್ರಕಾರ ಶೇಕಡಾ 40ರಷ್ಟು, 15 ರಿಂದ 18 ವಯಸ್ಸಿಗೊಳಪಟ್ಟ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದು, ಅವರಲ್ಲಿ ಶೇಕಡ 65ರಷ್ಟು ಹೆಣ್ಣು ಮಕ್ಕಳು ಮನೆ ಕೆಲಸಗಳಲ್ಲಿ ತೊಡಗಿರುತ್ತಾರೆ. ಮೇಲಿನ ಎಲ್ಲಾ ಸಮಸ್ಯೆಗಳು ಹೆಚ್ಚಾಗಿ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿರುವ ಹೆಣ್ಣು ಮಕ್ಕಳಲ್ಲಿ ಗೋಚರಿಸುತ್ತಿರುವುದರಿಂದ ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು ಏರಿಸುವ ನಿರ್ಧಾರವನ್ನು ಕೈಗೆತ್ತಿಕೊಳ್ಳಲಾಗಿದೆ.

## ಕರ್ನಾಟಕ ರಾಜ್ಯ ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಚಟುವಟಿಕೆಗಳು

ಕರ್ನಾಟಕ ರಾಜ್ಯ ಸಮುಚ್ಚಯದ ಸಭೆಯು ದಿನಾಂಕ 29–9–2020 ಮತ್ತು 7–12–2020ರಂದು ಗೂಗಲ್ ಮೂಲಕ ನಡೆಯಿತು. ಈ ಸಭೆಗೆ ಸಮುಚ್ಚಯದ ಪ್ರತಿನಿಧಿಗಳಾದ ಪಿ ಎಂ. ಸುಮಾ, ವತ್ಸಲಾ ನಾಯಕ್, ಹರಿಣಿ, ಫಕ್ಕೀರಮ್ಮ, ಆಶಾಲತಾ ಸುವರ್ಣ, ಮರ್ಲಿನ್ ಮಾರ್ಟಿಸ್, ತುಕಾರಾಮು, ಜೆಸಿಂತ, ಮೋಹನ್‌ಚಂದ್ರ ಭಾಗವಹಿಸಿದ್ದರು.

ದಿನಾಂಕ 27–12–2020ರಂದು ಮಂಗಳೂರಿನಲ್ಲಿ ಕರ್ನಾಟಕ ರಾಜ್ಯ ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಸಭೆ ನಡೆಯಿತು. ಈ ಸಭೆಗೆ ಕೊಪ್ಪಳ ಜಿಲ್ಲೆಯಿಂದ 3 ಪ್ರತಿನಿಧಿ, ಗದಗ ಜಿಲ್ಲೆಯಿಂದ 3 ಪ್ರತಿನಿಧಿ, ಚಿತ್ರದುರ್ಗ ಜಿಲ್ಲೆಯಿಂದ 5 ಪ್ರತಿನಿಧಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಿಂದ 4 ಪ್ರತಿನಿಧಿಗಳು ಭಾಗವಹಿಸಿದ್ದರು.



ಜಿಲ್ಲಾ ಮತ್ತು ರಾಜ್ಯ ಸಮುಚ್ಚಯಕ್ಕೆ ಹಣಕಾಸು ಬೆಂಬಲ, ಸಮುಚ್ಚಯದ ಬಲವರ್ಧನೆ, ಕಾನೂನು ಸೇವಾ ಪ್ರಾಧಿಕಾರದ ಬಲವರ್ಧನೆ, ಸುಗಮಕಾರರ ಸಮುಚ್ಚಯದ ಮಾದರಿ ಸ್ವಸಹಾಯದ ಸ್ಥಿತಿಗತಿ, ಜಿಲ್ಲಾ ಮತ್ತು ರಾಜ್ಯ ಸಮುಚ್ಚಯದ ಕ್ರಿಯಾ ಯೋಜನೆ, ಸಮುಚ್ಚಯಗಳಿಗೆ ನಿಯಮ ನಿಬಂಧನೆಗಳು, ಜಿಲ್ಲಾ – ರಾಜ್ಯ ಸಮುಚ್ಚಯ ಮತ್ತು ಪೂರಕ ಕಾನೂನು ಸುಗಮಕಾರರ ಪಾತ್ರಗಳ ಬಗ್ಗೆ ಚರ್ಚಿಸಲಾಯಿತು.

## ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಚಟುವಟಿಕೆಗಳು

### ದಕ್ಷಿಣ ಕನ್ನಡ ಜಿಲ್ಲೆ

ಸುಗಮಕಾರರ ಸಮುಚ್ಚಯದ ಸಭೆಯು ದಿನಾಂಕ ಸಪ್ಟೆಂಬರ್ 9, ಅಕ್ಟೋಬರ್ 13, ನವೆಂಬರ್ 10, ಡಿಸೆಂಬರ್ 8, 2020ರಂದು ಕ್ರಮವಾಗಿ ನಡೆಯಿತು. ಸಭೆಯಲ್ಲಿ 12,16,13,10 ಮಂದಿ ಕ್ರಮವಾಗಿ ಭಾಗವಹಿಸಿದ್ದರು. ಕೊರೋನಾ ಸಮಸ್ಯೆಗಳಿಗೆ ಸಹಾಯ, ಬೇರೆ ತಾಲೂಕುಗಳಲ್ಲಿ ಹೊಸ ಸುಗಮಕಾರರ ತರಬೇತಿ ಬಗ್ಗೆ, ಪುನರ್ಮನನ ಕಾರ್ಯಕ್ರಮ ಬಗ್ಗೆ ಚರ್ಚಿಸಲಾಯಿತು.

### ಮಹಿಳಾ ಕಾನೂನುಗಳ ಪುನರ್ಮನನ ಕಾರ್ಯಾಗಾರ

ಡಿಸೆಂಬರ್ 17ರಂದು ಡೀಡ್ಸ್ ಸಂಸ್ಥೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಕ್ಷಿಣ ಕನ್ನಡ ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಚಯ ಸಹಯೋಗದೊಂದಿಗೆ ಕದ್ರಿ ಬಾಲಭವನದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಬಾಲ ನ್ಯಾಯ ಮಂಡಳಿಯ ಸದಸ್ಯರಾದ ಶ್ರೀಮತಿ



ಕಸ್ತೂರಿ ಲೈಂಗಿಕ ಅಪರಾಧಿಗಳಿಂದ ಮಕ್ಕಳ ರಕ್ಷಣಾ ಕಾಯ್ದೆ ಬಗ್ಗೆ ಮಾಹಿತಿ ನೀಡಿದರು.

ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ರಕ್ಷಣಾ ಕಾಯ್ದೆ, ಕೆಲಸದ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ ತಡೆ ಕಾಯ್ದೆ ಬಗ್ಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಗೌರವಾನ್ವಿತ ಸದಸ್ಯ ಕಾರ್ಯದರ್ಶಿ ಶ್ರೀಮತಿ ಶಿಲ್ಪಾರವರು ಮಾಹಿತಿ ನೀಡಿದರು. 16 ಮಂದಿ ಪೂರಕ ಕಾನೂನು ಸುಗಮಕಾರರು ಭಾಗವಹಿಸಿದ್ದರು. ಶ್ರೀಮತಿ ಗೌರಿ, ವಕೀಲರು ಮತ್ತು ಮಂಗಳೂರು ವಕೀಲರ ಸಂಘದ ಅಧ್ಯಕ್ಷರು ಹಾಗೂ ಸಮಿತಿಯ ಸದಸ್ಯರು ಹಾಜರಿದ್ದರು. ಡೀಡ್ಸ್‌ನ ನಿರ್ದೇಶಕಿ ಮರ್ಲಿನ್ ಮಾರ್ಟಿಸ್, ಡೀಡ್ಸ್‌ನ ಸಿಬ್ಬಂದಿ ಉಪಸ್ಥಿತರಿದ್ದರು.

### ಹೊಸ ಪೂರಕ ಕಾನೂನು ಸುಗಮಕಾರರ ತರಬೇತಿ



ಡಿಸೆಂಬರ್ 30, 2020 ರಂದು ಹೊಸ ಪೂರಕ ಕಾನೂನು ಸುಗಮಕಾರರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಡೀಡ್ಸ್‌ನಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 16 ಮಂದಿ ಭಾಗವಹಿಸಿದ್ದರು. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಾಗುವ ಲೈಂಗಿಕ ದೌರ್ಜನ್ಯ ಬಗ್ಗೆ ಡೀಡ್ಸ್‌ನ ನಿರ್ದೇಶಕರಾದ ಮರ್ಲಿನ್ ಮಾರ್ಟಿಸ್‌ರವರು ಮಾಹಿತಿ ನೀಡಿದರು.

### ಗದಗ ಜಿಲ್ಲೆ



ಗದಗ ಜಿಲ್ಲೆಯ ಪೂರಕ ಕಾನೂನು ಸುಗಮಕಾರರ ಸಮುಚ್ಛಯದ ಸಭೆಯು ಸಪ್ಟೆಂಬರ್ 1, ಅಕ್ಟೋಬರ್ 13 ಮತ್ತು 27 ಹಾಗೂ ಡಿಸೆಂಬರ್ 2, 2020ರಂದು ಕ್ರಮವಾಗಿ ನಡೆಯಿತು. ಸಭೆಯಲ್ಲಿ 7, 15, 12, 13 ಮಂದಿ ಕ್ರಮವಾಗಿ ಭಾಗವಹಿಸಿದ್ದರು. ಸಭೆಯಲ್ಲಿ ಕೋವಿಡ್–19 ಲಾಕ್‌ಡೌನ್ ಸಮಯದಲ್ಲಿ ಅವರು ಎದುರಿಸಿದ ಸಮಸ್ಯೆಗಳು ಮತ್ತು ಕಷ್ಟದಲ್ಲಿರುವವರಿಗೆ ಸಹಾಯ ಮಾಡಿದುದರ ಬಗ್ಗೆ ಹಂಚಿಕೊಂಡರು. ಪೂರಕ ಕಾನೂನು ಸುಗಮಕಾರರ ಸ್ವ ಸಹಾಯ ಗುಂಪು ರಚಿಸಿ ಬ್ಯಾಂಕ್ ಖಾತೆ ತೆರೆಯುವುದು, ಪ್ಯಾರಾಲೀಗಲ್ ವಾಲ್ಯುಂಟಿಯರ್ಸ್ ಬಗ್ಗೆ ತಿಳಿದುಕೊಳ್ಳಲು ಸೇವಾ ಪ್ರಾಧಿಕಾರದ ಭೇಟಿ, 2020–21ರ ಕ್ರಿಯಾ ಯೋಜನೆ ಇತ್ಯಾದಿಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.



### ಕೊಪ್ಪಳ ಜಿಲ್ಲೆ

ಕೊಪ್ಪಳ ಜಿಲ್ಲೆಯ ಪೂರಕ ಕಾನೂನು ಸುಗಮಕಾರರ ಸಭೆಯು ಸಪ್ಟೆಂಬರ್ 2, ಅಕ್ಟೋಬರ್ 22, ನವೆಂಬರ್ 8, 2020ರಂದು ಕ್ರಮವಾಗಿ ನಡೆಯಿತು. ಸಭೆಯಲ್ಲಿ 21, 13, 10 ಮಂದಿ ಕ್ರಮವಾಗಿ ಭಾಗವಹಿಸಿದ್ದರು. ಸಭೆಯಲ್ಲಿ ಕೋವಿಡ್–19 ಲಾಕ್‌ಡೌನ್ ಸಮಯದಲ್ಲಿ ಅವರು ಎದುರಿಸಿದ ಸಮಸ್ಯೆಗಳು ಮತ್ತು ಕಷ್ಟದಲ್ಲಿರುವವರಿಗೆ ಸಹಾಯದ ಬಗ್ಗೆ ಹಂಚಿಕೆ, ಪೂರಕ ಕಾನೂನು ಸುಗಮಕಾರರ ಸ್ವ ಸಹಾಯ ಗುಂಪು ರಚಿಸಿ ಬ್ಯಾಂಕ್ ಖಾತೆ ತೆರೆಯುವುದು ಮತ್ತು 3ನೇ ಹಂತದ ತರಬೇತಿ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

### ಚಿತ್ರದುರ್ಗ ಜಿಲ್ಲೆ



ಚಿತ್ರದುರ್ಗ ಜಿಲ್ಲೆಯ ಪೂರಕ ಕಾನೂನು ಸುಗಮಕಾರರ ಸಭೆಯು ದಿನಾಂಕ 5–11–2020ರಂದು ಹೊಸದುರ್ಗದ ಒಪ್ಪತ್ತಿನ ಸ್ವಾಮಿ ಮಠದಲ್ಲಿ ನಡೆಯಿತು. ಈ ಸಭೆಗೆ 8 ಮಂದಿ ಭಾಗವಹಿಸಿದ್ದರು. ಕೊರೋನಾ ಸಮಸ್ಯೆಗಳು– ಸಹಕಾರ ಬಗ್ಗೆ, ಬ್ಯಾಂಕ್ ಖಾತೆ ತೆರೆಯುವುದು, ಹೊಸ ಸುಗಮಕಾರರ ತರಬೇತಿ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

### ಸಂಚಲನ

ಡೀಡ್ಸ್ ಸಂಸ್ಥೆ ರೂಪಿಸಿರುವ ಕರ್ನಾಟಕ ರಾಜ್ಯ ಮಹಿಳಾ ತರಬೇತುದಾರರ ಸಂಚಲನವು ಹತ್ತು ವರ್ಷ ಪೂರೈಸಿದ್ದು, ದಶಮಾನೋತ್ಸವದ ಸವಿ ನೆನಪಿನ ಅಸ್ಮಿತೆ ಎಂಬ ಸ್ಮರಣ ಸಂಚಿಕೆಯನ್ನು ಲೋಕಾಂತಗೊಳಿಸಲಾಯಿತು.



ಮುಖಪುಟ ವಿನ್ಯಾಸ: ಸುನೈಫ್ ವಿಟ್ಲ ಮುದ್ರಣ: ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A Newsletter by DEEDS, Mangalore

ವಿಳಾಸ : ಡೆವಲಪ್‌ಮೆಂಟ್ ಎಜುಕೇಶನ್ ಸರ್ವೀಸ್ (ಡೀಡ್ಸ್), ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. 575002, ದೂರವಾಣಿ: 0824–2217022, 4281037

E-mail : deeds82@rediffmail.com www.deedsmangaluru.in